ದಿನಾಂಕಃ 09/12/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಪಿ ಎಸ್ ಯು ವಕೀಲರಿಂದಃ

6. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಎಲ್ಲಾದರೂ ಅರ್ಜಿದಾರನ ವಿಳಾಸ ಜಿ ಜಿ ಮೆಹರವಾಡ ಕಟ್ಟಡದ ಎಂದು ನಮೂದು ಇದೆಯಾ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಅರ್ಜಿದಾರ ಹುಬ್ಬಳ್ಳಿಯ ಜಿ ಜಿ ಮೆಹರವಾಡ ಅಥವಾ ಆರ್ ಜಿ ಮೆಹರವಾಡ ಕಟ್ಟಡದಲ್ಲಿ ವಾಸವಿದ್ದಾನೆ ಎಂದು ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ. ಹುಬ್ಬಳ್ಳಿ ನಗರದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಸಿದ್ಧಾರೂಡ ನಗರ ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ಪ್ರದೇಶ ಎಂದರೆ ಗೊತ್ತಿಲ್ಲ. ಸದರಿ ಸಿದ್ಧಾರೂಡ ನಗರದಲ್ಲಿ ಕಾಲೋನಿಗಳು ಸಾಕಷ್ಟು ಇವೆ ಎಂದರೆ ಗೊತ್ತಿಲ್ಲ. ಹೆಗ್ಗೇರಿ ಕಾಲೋನಿ ನಿರ್ದಿಷ್ಟವಾಗಿ ಯಾವ ಕಾಲೋನಿಯಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಪೋಸ್ಟ ಮ್ಯಾನ್ ಭೇಟಿಯಾಗಿ ಅರ್ಜಿದಾರನ ಮನೆಗೆ ಇಂಟೀಮೇಷನ್ ಕೊಟ್ಟಿದ್ದೀರಾ ಎಂದು ಕೇಳಿದ್ದೀರಾ ಎಂದರೆ ಕೇಳುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ.

7. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಅನುಕೂಲವಾಗುವ ರೀತಿಯಲ್ಲಿ ನಾನೇ ಸೃಷ್ಟಿಸಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಿಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ